# ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ನಂ. ಹುದಾಮಪಾ/ಜಬಮಾಸಮೀಕ್ಷೆ/2018-19 ದಿನಾಂಕ: 14-02-2019

## ಸಾರ್ವಜನಿಕ ಪ್ರಕಟಣೆ

**ಜನತಾ ಬಜಾರ ಮಾರುಕಟ್ಟೆ ಕಟ್ಟಡದಲ್ಲಿ 1ನೇ ಮಹಡಿಯಲ್ಲಿ ಲಭ್ಯವಾಗುವ 1417 ಚ.ಮೀ, 2ನೇ ಮಹಡಿಯಲ್ಲಿ 1471 ಚ.ಮೀ ಸುಸಜ್ಜಿತ ಜಾಗೆಯಲ್ಲಿ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ ಹಾಗೂ ಖಾಸಗಿ ಸಂಸ್ಥೆಗಳ ಕಚೇರಿಯನ್ನು ಸ್ಥಾಪಿಸಲು ಬಾಡಿಗೆ ಆಧಾರದ ಮೇಲೆ ಪಡೆಯಲು ಅರ್ಹ ಅರ್ಜಿದಾರರಿಂದ ನೊಂದಾಯಿಸಲು ಬೇಡಿಕೆ ಸಮೀಕ್ಷೆ**

ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ಜನತಾ ಬಜಾರ ತರಕಾರಿ ಮಾರುಕಟ್ಟೆಯ ಕಟ್ಟಡದ ಪ್ರದೇಶವನ್ನು ನೂತನ ವಿನ್ಯಾಸದೊಂದಿಗೆ ಅಭಿವೃದ್ದಿಪಡಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಸುಸಜ್ಜಿತ ತರಕಾರಿ ಮಾರುಕಟ್ಟೆ ಹಾಗೂ ಉತ್ತಮ ಸ್ಥಳಾವಕಾಶ ಇರುವ ಕಟ್ಟಡವನ್ನು ಮರು ವಿನ್ಯಾಸದೊಂದಿಗೆ ವ್ಯವಸ್ಥಿತವಾಗಿ ಕೆಳಮಹಡಿಯಲ್ಲಿ ವಾಹನ ನಿಲುಗಡೆ. ನೆಲ ಮಹಡಿಯಲ್ಲಿ ವ್ಯಾಪಾರ ಮಳಿಗೆ ಹಾಗೂ ಮೊದಲನೆ ಮಹಡಿಯಲ್ಲಿ ಉತ್ತಮ ವಿಶಾಲವಾದ ಸ್ಥಳಾವಕಾಶ ಎರಡನೇ ಮಹಡಿಯಲ್ಲಿ ವಿಶಾಲವಾದ ಸುಸಜ್ಜಿತ ಸ್ಥಳಾವಕಾಶ ಒದಗಿಸಿ ಕಟ್ಟಡ ನಿರ್ಮಿಸಲಾಗುತ್ತಿದೆ.

ಪ್ರಸ್ತುತ ಮೊದಲನೇ ಮಹಡಿಯಲ್ಲಿ ಅಂದಾಜು 1417 ಚ.ಮೀ ಸ್ಥಳಾವಾಕಾಶ, ಎರಡನೇ ಮಹಡಿಯಲ್ಲಿ 1417 ಚ.ಮೀ ಸ್ಥಳಾವಕಾಶ ಸಾರ್ವಜನಿಕ ಸಂಘ-ಸಂಸ್ಥೆಗಳಿಗೆ ಭಾಡಿಗೆಯೊಂದಿಗೆ ಲಭ್ಯವಾಗುತ್ತದೆ. ಉದ್ದೇಶಿತ ಸ್ಥಳಾವಕಾಶದ ನಕ್ಷೆಯನ್ನು ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ. ಸದರಿ ಸ್ಥಳದಲ್ಲಿ ಸಾರ್ವಜನಿಕರು ಸೂಕ್ತ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ, ಕಾರ್ಪೋರೇಟ್ ಸಂಸ್ಥೆ, ಬ್ಯಾಂಕುಗಳಿಗೆ ಮತ್ತು ಇತರ ವ್ಯಾಪಾರ ಕೈಗೊಳ್ಳಲು ಅನುಕೂಲವಾಗಿರುತ್ತದೆ. ಸದರಿ ಸ್ಥಳವನ್ನು ಸಾರ್ವಜನಿಕರ ಬೇಡಿಕೆ ಮತ್ತು ಚಟುವಟಿಕೆಗೆ ಅನುಸಾರ, ಪೌರಾಡಳಿತ ನಿರ್ದೇಶನಾಲಯದ ಮಾರುಕಟ್ಟೆಯ ನಿಯಮಾವಳಿಯಂತೆ ಸ್ಥಳಾವಕಾಶವನ್ನು ಹಂಚಿಕೆ ಮಾಢಿ ಬಾಡಿಗೆಯನ್ನು ಆಕರಿಸಿ ಒದಗಿಸಲಾಗುವುದು. ಕಾರಣ ಸಾರ್ವಜನಿಕರು ನಿಯೋಜಿತ ಕಟ್ಟಡದಲ್ಲಿ ಲಭ್ಯವಾಗುವ ಸ್ಥಳಕ್ಕೆ ಬೇಡಿಕೆ ಪತ್ರವನ್ನು ವಲಯ ಕಚೇರಿಗೆ ದಿ: 23-02-2019 ರ ಒಳಗಾಗಿ ಸಲ್ಲಿಸಲು ಕೋರಲಾಗಿದೆ. ಅರ್ಜಿ ನಮೂನೆಯನ್ನು ವಲಯ ಕಚೇರಿ 09 ಇಂದಿರಾ ಗಾಜಿನ ಮನೆ ಆವರಣ ಇಲ್ಲಿ ಪಡೆಯಬಹುದು ಅಥವಾ ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ವೆಬ್ ಸೈಟ್ hubballidharwadsmartcity.com ಮೂಲಕ ಪಡೆಯಬಹುದಾಗಿದೆ. ಸಾರ್ವಜನಿಕರು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರಣಾ ಮಾಡಿ ಆಯುಕ್ತರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಇವರ ಹೆಸರಿನಲ್ಲಿ ರೂ. 500/- ಗಳ ಡಿಡಿಯೊಂದಿಗೆ ಅರ್ಜಿಯನ್ನು ಲಗತ್ತಿಸಿ ದಿ: 23-02-2019 ರ ಒಳಗಾಗಿ ಸಲ್ಲಿಸಲು ಕೋರಲಾಗಿದೆ.

ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ